ದಿಃ 23.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
**ಪಾಟೀ ಸವಾಲುಃ** ಎದುರುದಾರರ ಪರವಾಗಿ ಶ್ರೀ ಕೆ.ಎಂ.ಪಿ. ವಕೀಲರಿಂದಃ

ನನ್ನ ಜಮೀನು ಕಾಲುವೆ ನಿರ್ಮಾಣಕ್ಕಾಗಿ ವಶಪಡಿಸಿಕೊಳ್ಳಲಾಗಿದೆ ಎಂದರೆ ಹೌದು. ನನ್ನ ಜಮೀನಿನಲ್ಲಿ ಕಾಲುವೆ ಆಗಿದೆ. ಸದರಿ ಕಾಲುವೆ ನಿರ್ಮಾಣ ಮಾಡುವ ಪೂರ್ವದಲ್ಲಿ ನನ್ನ ಜಮೀನು ಒಣ ಬೇಸಾಯ ಎಂದರೆ ಇಲ್ಲ ನೀರಾವರಿ ಇದ್ದು ಅದು ದಾಖಲೆಯಲ್ಲಿ ಇದೆ. ನನ್ನ ಜಮೀನಿನ ಸುತ್ತಮುತ್ತಲೂ ವ್ಯವಸಾಯೇತರ ಆಗಿದೆ. ಆ ಕುರಿತು ನಾನು ದಾಖಲೆ ಇಟ್ಟಿಲ್ಲ ಎಂದರೆ ಇಟ್ಟಿಲ್ಲ. ನಿಪಿ-21, 22 ನನ್ನ ಸರ್ವೆ ನಂಬರಗೆ ಹೊಂದಿಕೊಂಡು ಇಲ್ಲ, ಅದು ನನ್ನ ಅರ್ಜಿಗೆ ಪೂರಕವಾಗಿ ಇಲ್ಲ ಎಂದು ಪ್ರಶ್ನಿಸಿದರೆ ಸರಿಯಲ್ಲ. ಸದರಿ ನಿಪಿ-21, 22 ಸೀಮಿಕೇರಿ ಗ್ರಾಮದ್ದು ಇದ್ದು ಅದು ನನ್ನ ಗ್ರಾಮದ್ದು ಅಲ್ಲ ಎಂದರೆ ಸರಿ. ಸೀಮಿಕೇರಿ ಗ್ರಾಮ ನಮ್ಮ ಜಮೀನಿನಿಂದ 8-10 ಕಿಲೋಮೀಟರ ಅಂತರದಲ್ಲಿ ಇದೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದೇನೆ ಎಂದರೆ ಹೌದು. ನನ್ನ ಜಮೀನು ಎನ್.ಎ ಮಾಡಲು ಪ್ರಯತ್ನ ಮಾಡಿಲ್ಲ ಎಂದರೆ ಇನ್ನು ಮಾಡಿಲ್ಲ. ನನ್ನ ಜಮೀನು ಬಿನ್ ಶ್ಕೇತಿ ಮಾಡಲು ಯೋಗ್ಯ ಎಂದು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಕ್ರಯ ಕರಾರು ಪತ್ರಗಳೆಲ್ಲ ನನ್ನ ಅರ್ಜಿಗೆ ಪೂರಕವಾಗಿ ಇಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಛಬ್ಬಿ ಗ್ರಾಮದಲ್ಲಿ ಒಣಬೇಸಾಯದ ಜಮೀನುಗಳು ಮತ್ತು ನೀರಾವರಿ ಜಮೀನುಗಳು ಮಾರಾಟ ಆಗಿವೆ ಎಂದರೆ ಆಗಿವೆ. ನಾನು ನಮ್ಮ ಗ್ರಾಮದ ಜಮೀನು ಕಮ್ಮಿ ಬೆಲೆಗೆ ಮಾರಾಟ ಆಗಿದೆ ಎಂದು ಅವುಗಳನ್ನು ಬಿಟ್ಟು ಬೇರೆ ಕ್ರಯಪತ್ರ ಕ್ರಯ ಕರಾರು ತಂದು ಹಾಜರಿಸಿದ್ದೇನೆ ಎಂದರೆ ಇಲ್ಲ. ನಾನು ಸಲ್ಲಿಸಿರುವ ಐತೀರ್ಪುಗಳು ನಿಪಿ-16 ರಿಂದ 19 ಬಾಗಲಕೋಟೆಗೆ ಹತ್ತಿರದಲ್ಲಿ ಇರುವ ಜಮೀನುಗಳದ್ದು ಇದೆ ನಮ್ಮ ಗ್ರಾಮಕ್ಕೆ ಸಂಬಂಧ ಪಡುವುದಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದಾಖಲೆಗಳು ನಿಪಿ-16 ರಿಂದ 20 ನನ್ನ ಜಮೀನಿಗೆ ಸಂಬಂದಪಡುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಸಾಗವಾಣಿ ಗಿಡಗಳು ಇರುವ ಬಗ್ಗೆ ನಾನು ಪ್ರತ್ಯೇಕವಾಗಿ ಬೆಲೆ ನಿಗಧಿ ಮಾಡಿಸಿಲ್ಲ. ಒಂದೊಂದು ಸಾಗವಾಣಿ ಮರಕ್ಕೂ ಲಕ್ಷಕ್ಕಿಂತ ಹೆಚ್ಚು ಬೆಲೆ ಬಾಳುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿದ್ದಿದೇನೆ ಎಂದರೆ ಇಲ್ಲ. ಸಾಗವಾಣಿ ಮರಗಳನ್ನು ನನಗೆ ಹಸ್ತಾಂತರಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಇದ್ದ ಬೋರವೆಲನ ಮೌಲ್ಯಮಾಪನ ಎಸ್.ಎಲ್.ಎ.ಓ

ಮಾಡಿದ್ದಾರೆ ಎಂದರೆ ಸರಿಯಲ್ಲ. ಅದು ಸರಿಯಾಗಿ ನಿರ್ಧರಣೆ ಆಗಿದೆ ಎಂದರೆ ಸರಿಯಲ್ಲ. ನನ್ನ ಜಮೀನು ಪಕ್ಕದಲ್ಲಿ ವಾಣಿಜ್ಯ ಉದ್ದೇಶಕ್ಕೆ ಬಿನ್ ಶ್ಕೆತಿ ಆಗಿದೆ ಎಂದು ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ. ಪುನರವಸತಿ ಕೇಂದ್ರ ನನಗೆ ಬಹಳ ಹತ್ತಿರದಲ್ಲಿ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಇಲ್ಲ. ನನ್ನ ಜಮೀನಿಂದ ಆ ರೀತಿ ಬಿನಶ್ಕೇತಿ ಜಮೀನು 7-8 ಕಿಲೋಮೀಟರ ಅಂತರದಲ್ಲಿ ಇವೆ ಎಂದರೆ ಸರಿಯಲ್ಲ. ನನ್ನ ಜಮೀನು ಯೋಜನಾ ಪ್ರಾಧಿಕಾರದಂತೆ ಬೆಲೆ ಹೊಂದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ವರ್ಷಕ್ಕೆ ಒಂದೇ ಬೆಳೆ ಬರಲು ಸಾಧ್ಯವಾಗುತ್ತಿತ್ತು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಜಮೀನಿನಲ್ಲಿ ಎರಡು ಬೆಳೆ ಬರುತ್ತಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನು 15 ಕಿಲೋಮೀಟರಗಿಂತ ಹೆಚ್ಚು ಅಂತರದಲ್ಲಿ ಇದೆ ಎಂದರೆ ಸರಿಯಲ್ಲ. ನನ್ನ ಜಮೀನು ರಾಷ್ಟ್ರೀಯ ಹೆದ್ದಾರಿ ಆಗಲಿ ರಾಜ್ಯ ಹೆದ್ದಾರಿ ಆಗಲಿ ಹೊಂದಿಕೊಂಡು ಇಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿನ ಮೇಲೆ ಕನಿಷ್ಟ 6 ಕೋಟಿಗಿಂತ ಹೆಚ್ಚು ಬೆಲೆಯಾಗುತ್ತಿತ್ತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನು ಪ್ರತಿ ಚದರಅಡಿಗೆ 6000 ಕ್ಕಿಂತ ಹೆಚ್ಚು ಬೆಲೆ ಬಾಳುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎಸ್.ಎಲ್.ಎ.ಓ ನನ್ನ ಜಮೀನಿಗೆ ಭೇಟಿ ನೀಡಿದ್ದಾರೆ ಎಂದರೆ ನೀಡಿದ್ದಾರೆ. ಎಸ್.ಎಲ್.ಎ.ಓ ನನ್ನ ಜಮೀನನ್ನು ಸ್ಥಳ ಪರೀಶಿಲನೆ ನಡೆಸಿ ಸೂಕ್ತ ಬೆಲೆ ನಿರ್ಧರಣೆ ಮಾಡಿದ್ದಾರೆ ಎಂದರೆ ಇಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಎದುರುದಾರರ ಪರವಾಗಿ ಡಿ.ಜಿ.ಪಿ. ಯವರಿಂದಃ

ಪ್ರತ್ಯೇಕವಾಗಿ ಇಲ್ಲ.

ಮರು ಸವಾಲು ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.